# ಪ್ರಹ್ಲಾದನ ಅದ್ವೈತ ಭಾವನೆ

# ವಿಷ್ಣು ಪುರಾಣ

ಸಂಗ್ರಹಿಸಿದ್ದು: ಶ್ರೀ ಜಿ.ಆರ್.ಪಾಟೀಲ, ಧಾರವಾಡ

# ಪ್ರಹ್ಲಾದನ ಅದ್ವೈತಭಾವನೆ.

ಇಂದು ನೃಸಿಂಹ ಜಯಂತಿಯ ಮಂಗಲಮಯ ದಿವಸ. ಭಗವಾನ್ ಶ್ರೀ ಲಕ್ಷ್ಮೀನೃಸಿಂಹನು ಪ್ರಹ್ಲಾದನನ್ನು ಕಾಪಾಡಿದ ದಿನ. ಪ್ರಹ್ಲಾದನ "ಅದ್ವೈತಭಾವನೆ" ಯನ್ನು ಕುರಿತು ಚಿಂತಿಸಲು, ಅನುಸಂಧಾನ ಮಾಡಲು, ಇದು ತುಂಬ ಪ್ರಶಸ್ತವಾದ ಸಮಯ.

ಯೋಗವಾಸಿಷ್ಠ ಹಾಗೂ ವಿಷ್ಣು ಪುರಾಣಗಳು ವಿವರಿಸಿದ ಈ ಭಾವನೆಯನ್ನು ನೋಡೋಣ.

* * * * *

ಭಕ್ತಾಗ್ರೇಸರನೆಂದು ಜೇಗೀಯಮಾನನಾದ ಪ್ರಹ್ಲಾದನು ತನ್ನ ಅದ್ವೈತಾನುಭವವನ್ನು ಪ್ರಕಟಿಸುತ್ತ, ಹೀಗೆ ಉದ್ಗರಿಸಿದ್ದಾನೆ.

ಅಹಂ ತ್ವಂ ತ್ವಮಹಂ ದೇವ ದಿಷ್ಟ್ಯಾ ಭೇದೋಽಸ್ತಿ ನಾವಯೋಃ ॥<br>
ದಿಷ್ಟ್ಯಾ ಮತ್ತಾಮಸಿ ಪ್ರಾಪ್ತೋ ದಿಷ್ಟ್ಯಾ ತತ್ತಾಮಹಂ ಗತಃ ॥<br>
ಮಹ್ಯಂ ತುಭ್ಯಮನಂತಾಯ ತುಭ್ಯಂ ಮಹ್ಯಂ ಶಿವಾತ್ಮನೇ ॥<br>
ನಮೋ ದೇವಾಧಿದೇವಾಯ ಪರಾಯ ಪರಮಾತ್ಮನೇ ॥

[ಯೋಗವಾಸಿಷ್ಠ–5 ನೆಯ ಉಪಶಮ ಪ್ರಕರಣ– 36 ನೆಯ ಸರ್ಗ– [24 ನೆಯ ಶ್ಲೋಕದಿಂದ ಮುಂದೆ.]

[ಭಗವಂತನೇ! ನಾನೇ ನೀನು; ನೀನೇ ನಾನು. ಸುದೈವದಿಂದ ನಮ್ಮಿಬ್ಬರಲ್ಲಿ ಭೇದವಿಲ್ಲ. ಸುದೈವದಿಂದ ನಾನು ನಿನ್ನನ್ನು ಹೊಂದಿದ್ದೇನೆ. ಸುದೈವದಿಂದ ನೀನು ನನ್ನನ್ನು ಹೊಂದಿದ್ದೀಯೇ! ಅನಂತನಾದ ಹಾಗೂ ಶಿವಸ್ವರೂಪನಾದ ದೇವತೆಗಳಿಗೂ ದೇವನಾದ, ಎಲ್ಲವನ್ನೂ ಮೀರಿ ಆಚೆ ಇರುವ, ಪರಮಾತ್ಮನಾದ ನಿನಗೆ ನನ್ನ ಹಾಗೂ ನನಗೆ ನಿನ್ನ ನಮಸ್ಕಾರಗಳು.]

"ಯೋಗವಾಸಿಷ್ಠವು ಅದ್ವೈತಪರವಾದ ಗ್ರಂಥ. ಅದು ಹೇಳಿದ್ದು ನಮಗೆ ಪ್ರಮಾಣವಾಗಲಾರದು. ಆದ್ದರಿಂದ ನಾವು ಅದನ್ನು ನಂಬುವದಿಲ್ಲ." ಎಂದು ಕೆಲವರು ಹೇಳಬಹುದು. ಆದರೆ ಇದೇ ಮಾತನ್ನೇ ವಿಷ್ಣುಪುರಾಣವು ಹೇಳಿದರೆ?

ವಿಷ್ಣುಪುರಾಣವು ಸಕಲರಿಗೂ ಪರಮಪ್ರಮಾಣಭೂತವಾದ ಗ್ರಂಥ. ಅದರ ಪ್ರಥಮಾಂಶದ 19 ನೆಯ ಮತ್ತು 20 ನೆಯ ಅಧ್ಯಾಯಗಳಲ್ಲಿ ಈ ವಿಷಯ ಇದೆ. ವಿವರಗಳಿಗೆ ಆಸಕ್ತರು ಮೂಲ ವಿಷ್ಣುಪುರಾಣವನ್ನೇ ನೋಡಬಹುದು.

19 ನೆಯ ಅಧ್ಯಾಯದ 47 ನೆಯ ಶ್ಲೋಕದಿಂದ ಮುಂದೆ ಈ ರೀತಿ ಇದೆ.

ಭಗವನ್ನಾರಾಯಣನ ಸ್ಮರಣೆ ಮಾಡಬೇಡವೆಂದು ಎಷ್ಟು ಹೇಳಿದರೂ ಕೇಳದೆ ಪ್ರಹ್ಲಾದನು ಮತ್ತೆ ಮತ್ತೆ ನಾರಾಯಣ ಸ್ಮರಣೆ ಮಾಡುವದನ್ನು ಸೈರಿಸಲಾರದೆ ಹಿರಣ್ಯಕಶಿಪುವು ಅವನಿಗೆ ನಾನಾತರದ ಚಿತ್ರಹಿಂಸೆಗಳನ್ನು ಕೊಟ್ಟನು. ಅವನು ಇಂಥ ಯಾವುದಕ್ಕೂ ಮಣಿಯದೆ ಇದ್ದಾಗ, ಕೊನೆಗೆ ಅವನನ್ನು ನಾಗಪಾಶದಿಂದ ಬಿಗಿಸಿ ಸಮುದ್ರದಲ್ಲಿ ಎಸೆಯಲು ಆಜ್ಞಾಪಿಸಿದನು. ಆ ಸಂದರ್ಭದಲ್ಲಿ ನಾಗಪಾಶಗಳಿಂದ ಬಿಗಿಯಲ್ಪಟ್ಟ ಪ್ರಹ್ಲಾದನು "ನಾನೇ ಭಗವಂತ" [ಅಹಂ ಬ್ರಹ್ಮಾಸ್ಮಿ] ಎಂಬುದರ ಅನುಸಂಧಾನ ಮಾಡಿ ಆ ನಾಗಪಾಶಗಳಿಂದ ಬಿಡುಗಡೆ ಹೊಂದಿದನು. ಅದರ ವಿವರವನ್ನು ಈ ಮುಂದೆ ಕೊಟ್ಟಿದೆ.

ನಮೋಽಸ್ತು ವಿಷ್ಣವೇ ತಸ್ಮೈ ಯಸ್ಯಾಭಿನ್ನಮಿದಂ ಜಗತ್ ।<br>
ಧ್ಯೇಯಃ ಸ ಜಗತಾಮಾದ್ಯಃ ಸ ಪ್ರಸೀದತು ಮೇಽವ್ಯಯಃ ॥ 1–19–82 ॥<br>
ಯತ್ರೋತಮೇತತ್ ಪ್ರೋತಂ ಚ ವಿಶ್ವಮಕ್ಷರಮವ್ಯಯಮ್ ।<br>
ಆಧಾರಭೂತಂ ಸರ್ವಸ್ಯ ಸ ಪ್ರಸೀದತು ಮೇ ಹರಿಃ ॥ 1–19–83 ॥<br>
ಓಂ ನಮೋ ವಿಷ್ಣವೇ ತಸ್ಮೈ ನಮಸ್ತಸ್ಮೈ ಪುನಃ ಪುನಃ ।<br>
ಯತ್ರ ಸರ್ವಂ ಯತಃ ಸರ್ವಂ ಯಃ ಸರ್ವಂ ಸರ್ವಸಂಶ್ರಯಃ ॥ 1–19–84॥<br>
ಸರ್ವಗತ್ವಾದನಂತಸ್ಯ ಸ ಏವಾಹಮವಸ್ಥಿತಃ ।<br>
ಮತ್ತಃ ಸರ್ವಮಹಂ ಸರ್ವಂ ಮಯಿ ಸರ್ವಂ ಸನಾತನೇ ॥ 1–19–85 ॥<br>
ಅಹಮೇವಾಕ್ಷಯೋ ನಿತ್ಯಃ ಪರಮಾತ್ಮಾತ್ಮಸಂಶ್ರಯಃ ।<br>
ಬ್ರಹ್ಮಸಂಜ್ಞೋಽಹಮೇವಾಗ್ರೇ ತಥಾಂತೇ ಚ ಪರಃ ಪುಮಾನ್ ॥ 1–19 86 ॥

ಶ್ರೀ ಪರಾಶರ ಉವಾಚ ॥<br>
ಏವಂ ಸಂಚಿಂತಯನ್ ವಿಷ್ಣುಂ ಅಭೇದೇನಾತ್ಮನೋ ದ್ವಿಜ ।<br>
ತನ್ಮಯತ್ವಮವಾಪ್ಯಗ್ರ್ಯಂ ಮೇನೇ ಚಾತ್ಮಾನಮಚ್ಯುತಮ್ ॥ 1–20–1 ॥

ವಿಸಸ್ಮಾರ ತಥಾತ್ಮಾನಂ ನಾನ್ಯತ್ ಕಿಂಚಿದಜಾನತ ।
ಅಹಮೇವಾವ್ಯಯೋಽನಂತಃ ಪರಮಾತ್ಮೇತ್ಯಚಿಂತಯತ್ ॥ 1–20–2 ॥
ತಸ್ಯ ತದ್ಭಾವನಾ ಯೋಗಾತ್ ಕ್ಷೀಣಪಾಪಸ್ಯ ವೈ ಕ್ರಮಾತ್ ।
ಶುದ್ಧೇಽಂತಃಕರಣೇ ವಿಷ್ಣುಸ್ತಸ್ಥೌ ಜ್ಞಾನಮಯೋಽಚ್ಯುತಃ ॥ 1–20–3 ॥
ಯೋಗಪ್ರಭಾವಾತ್ ಪ್ರಹ್ಲಾದೇ ಜಾತೇ ವಿಷ್ಣುಮಯೇಽಸುರೇ ।
ಚಲತ್ಯುರಗಬಂಧೈಸ್ತೈರ್ಮೈತ್ರೇಯ ತ್ರುಟಿತಂ ಕ್ಷಣಾತ್ ॥ 1–20–4 ॥
ಭ್ರಾಂತಗ್ರಾಹಗಣಃ ಸೋರ್ಮಿರ್ಯಯೌ ಕ್ಷೋಭಂ ಮಹಾರ್ಣವಃ ।
ಚಚಾಲ ಚ ಮಹೀ ಸರ್ವಾ ಸಶೈಲವನಕಾನನಾ ॥ 1–20–5 ॥
ಸ ಚ ತಂ ಶೈಲಸಂಘಾತಂ ದೈತ್ಯೈರ್ನ್ಯಸ್ತಮಥೋಪರಿ ।
ಉತ್ಕ್ಷಿಪ್ಯ ತಸ್ಮಾತ್ಸಲಿಲಾತ್ ನಿಶ್ಚಕ್ರಾಮ ಮಹಾಮತಿಃ ॥ 1–20–6 ॥

[ಅನುವಾದ: ಯಾರಿಂದ ಈ ಜಗತ್ತು ಸರ್ವಥಾ ಅಭಿನ್ನವಾಗಿದೆಯೋ, ಆ ವಿಷ್ಣುವಿಗೆ ನಮಸ್ಕಾರ. ಜಗತ್ತುಗಳಿಗೆ ಆದಿ–ಕಾರಣನೂ ಯೋಗಿಧ್ಯೇಯನೂ ಅವ್ಯಯನೂ ಆದ ಶ್ರೀಹರಿಯು ನನಗೆ ಪ್ರಸನ್ನನಾಗಲಿ. ಯಾರಲ್ಲಿ ಈ ವಿಶ್ವವು ಓತಪ್ರೋತವಾಗಿದೆಯೋ ಅಂತಹ ಅಕ್ಷರವೂ ಅವ್ಯಯವೂ ಆದ ಮತ್ತು ಸರ್ವಕ್ಕೆ ಆಧಾರಭೂತವಾದ ಶ್ರೀ ಹರಿಯು ನನಗೆ ಪ್ರಸನ್ನನಾಗಲಿ. ಸರ್ವಾಧಾರನಾದ ಯಾರಲ್ಲಿ ಸರ್ವವೂ ಇದೆಯೋ, ಯಾರಿಂದ ಸರ್ವವೋ, ಯಾರೇ ಸರ್ವವೋ ಆ ವಿಷ್ಣುವಿಗೆ ಓಂ ನಮಃ ! ಓಂ ನಮಃ ! ಮತ್ತ ಮತ್ತೆ ಓಂ ನಮಃ ! ಅನಂತನು ವಿಭುವಾದ್ದರಿಂದ ಅವನೇ ನಾನಾಗಿ ನಿಂತಿದ್ದಾನೆ. ನನ್ನಿಂದ ಸರ್ವವೂ ಹುಟ್ಟಿದೆ. ನಾನೇ ಸರ್ವ! ಸನಾತನನಾದ ನನ್ನಲ್ಲಿ ಸರ್ವವೂ ಇದೆ. ಅಕ್ಷಯನೂ ನಿತ್ಯನೂ ತನಗೆ ತಾನೇ ಆಧಾರನೂ ಆದ ಪರಮಾತ್ಮನು ನಾನೇ! ಜಗತ್ತಿನ ಆದ್ಯಂತಗಳಲ್ಲಿಯೂ ಇರತಕ್ಕ "ಬ್ರಹ್ಮ" ಎಂಬ ಹೆಸರಿನ ಪರಮಪುರುಷನು ನಾನೇ!" ಎಂದು ಸ್ತುತಿಸುತ್ತಿದ್ದನು. [ಅರ್ಥಾತ್ "ಅಹಂ ಬ್ರಹ್ಮಾಸ್ಮಿ"ಯ ಅನುಸಂಧಾನ ಮಾಡುತ್ತಿದ್ದನು.]

ಪರಾಶರರುಹೇಳಿದರು. "ಹೀಗೆ ಪ್ರಹ್ಲಾದನು ವಿಷ್ಣುವನ್ನು ತನಗೆ ಅಭಿನ್ನನೆಂದು ಧ್ಯಾನಿಸುತ್ತ, ತನ್ಮಯತೆಯ ಪರಾಕಾಷ್ಠೆಯನ್ನು ಪಡೆದು ತಾನೇ ಅಚ್ಯುತನೆಂದು ತಿಳಿದನು. ತನ್ನ ಪ್ರತ್ಯೇಕ ವ್ಯಕ್ತಿತ್ವವನ್ನು ಮರೆತನು. [ತನ್ನ ಪ್ರತ್ಯೇಕ ವ್ಯಕ್ತಿತ್ವವನ್ನು ಮರೆತಾಗಲೇ, ತಾನೇ ವಿಷ್ಣುವೆಂದು ಅನುಸಂಧಾನಮಾಡಿದಾಗಲೇ ಮಾಯಾಪಾಶಗಳಿಂದ ಬಿಡುಗಡೆ ಸಾಧ್ಯ ಎಂಬುದನ್ನು ಇದು ಎತ್ತಿತೋರಿಸುತ್ತದೆ.] ಬಾಹ್ಯವಾದ ಯಾವುದೂ ಅವನಿಗೆ ಗೋಚರಿಸಲಿಲ್ಲ. "ಅವ್ಯಯನೂ ಅನಂತನೂ ಆದ ಪರಮಾತ್ಮನು ನಾನೇ" ಎಂದು ಮಾತ್ರ ಧ್ಯಾನಿಸುತ್ತಿದ್ದನು. ಈ ರೀತಿ ಪರಮಾತ್ಮ–ಭಾವನಾಯೋಗದಿಂದ ಕ್ರಮವಾಗಿ ಅವನ ಪಾಪಗಳೆಲ್ಲ ಕ್ಷಯಿಸಿದವು. ["ಅಹಂ ಬ್ರಹ್ಮಾಸ್ಮಿ"ಯ ಅನುಸಂಧಾನದಿಂದ ಮಾತ್ರ ಸಕಲಪಾಪಗಳು ಕ್ಷಣಾರ್ಧದಲ್ಲಿ ಕ್ಷೀಣವಾಗುವವೆಂಬುದನ್ನು ಇದು ತೋರಿಸುತ್ತದೆ.] ಶುದ್ಧವಾದ ಅವನ ಅಂತಃಕರಣದಲ್ಲಿ ಅಚ್ಯುತನಾದ ವಿಷ್ಣುವು ಜ್ಞಾನಮಯನಾಗಿ ನೆಲೆಸಿದನು. ಯೋಗಪ್ರಭಾವದಿಂದ ಅಸುರ–ಕುಮಾರನಾದ ಪ್ರಹ್ಲಾದನು ವಿಷ್ಣುಸ್ವರೂಪನಾಗಿ ಚಲಿಸುತ್ತಿರಲು, ಮೈತ್ರೇಯ, ನಾಗಪಾಶಗಳು ಒಂದುಕ್ಷಣದಲ್ಲಿ ಹರಿದು ಬಿದ್ದವು. ಸಮುದ್ರದಲ್ಲಿ ಅಲೆಗಳೆದ್ದು ಮಹಾಸಾಗರವು ಕ್ಷೋಭಿಸಿತು. ಮೊಸಳೆ ಮೊದಲಾದ ಜಲಜಂತುಗಳು ದಿಕ್ಕುಗೆಟ್ಟವು. ಪರ್ವತಾರಣ್ಯಸಹಿತವಾಗಿ ಪೃಥ್ವಿಯೇ ಅಲ್ಲಾಡಿತು. ದೈತ್ಯರು ಮೇಲ್ಗಡೆ ಇಡುಕಿದ್ದ ಪರ್ವತಗಳನ್ನು ಪ್ರಹ್ಲಾದನು ತಳ್ಳಿಹಾಕಿ ಸಮುದ್ರಜಲದಿಂದ ಹೊರಗೆ ಬಂದನು."

* * * * *

"ನಾನು ಬ್ರಹ್ಮವಲ್ಲ" ಎಂಬ ಭಾವನೆ ಇರುವವರೆಗೂ ಪ್ರಹ್ಲಾದನಿಗೆ ನಾಗಪಾಶಗಳಿಂದ [ಮಾಯಾಪಾಶದಿಂದ] ಬಿಡುಗಡೆ ಸಿಕ್ಕಲಿಲ್ಲ. ಅವನು ಯಾವಾಗ "ನಾನೇ ವಿಷ್ಣು" ಎಂಬ ಪರಮಸತ್ಯವನ್ನು ಅನುಸಂಧಾನಮಾಡಿದನೋ, ಆಗ ಕ್ಷಣಾರ್ಧದಲ್ಲಿ, ಅವನ ಪಾಶಗಳೆಲ್ಲ ಹರಿದು ಹೋದವು.

ವಿಷ್ಣುಪುರಾಣವನ್ನು ಓದುವದರಿಂದ ಅನೇಕ ಲಾಭಗಳುಂಟು. ಅದರಲ್ಲಿ ಹೆಜ್ಜೆಹೆಜ್ಜೆಗೂ ಅದ್ವೈತದ ಪ್ರಮೇಯಗಳನ್ನು ಅತಿ ಸರಳವಾಗಿ ಸುಂದರವಾಗಿ ನಿರೂಪಿಸಿ ಸಮರ್ಥಿಸಲಾಗಿದೆ. ದಯಮಾಡಿ ಎಲ್ಲ ಅದ್ವೈತಿಗಳೂ ಅದನ್ನು ಓದುವದಷ್ಟೇ ಅಲ್ಲ, ಮನನ ಮಾಡಬೇಕೆಂದು ನಾನು ಅದ್ವೈತಿಗಳಲ್ಲಿ ವಿನಂತಿಸುವೆ.

ಜಿ.ಆರ್.ಪಾಟೀಲ [ಹೂಲಿ] ಧಾರವಾಡ. 25–5–2021.